

ಉದ್ಯೋಗದ ಶಿಖರದಿಂದ ಬೀಳುವವರಲ್ಲಿ ನಾವೂ ಇರಬಹುದು. ಮುನ್ನೆಚ್ಚರಿಕೆ ಇದ್ದಲ್ಲಿ ಬಿದ್ದಾಗ ಏಳುವುದು ಕಷ್ಟವೇನೂ ಅಲ್ಲ...



ಪಟ್ಟಿ ಮಾಡಿ. ಅವರಿಂದ ಪ್ರೇರಣೆಯನ್ನು ಪಡೆಯಲು ಪ್ರಯತ್ನಿಸಬೇಕು.

## 6. ಕಲಿಕೆ ಮುಂದುವರಿಸಿ

ನಮ್ಮ ಓದಿನಿಂದ ನಮಗೆ ಕೆಲಸ ಸಿಕ್ಕಿರಬಹುದು. ಹಾಗೆಂದು ಓದು ಅಥವಾ ಕಲಿಕೆಯು ಉದ್ಯೋಗದ ಗಳಿಕೆಯೊಂದಿಗೆ ಮುಗಿಯಬಾರದು. ನಮ್ಮ ರೆಸ್ಯೂಮ್‌ನಲ್ಲಿ ಒಂದೋ ಎರಡೋ ಡಿಗ್ರಿ ಅಥವಾ ಡಿಪ್ಲೊಮಾಗಳಿರಬಹುದು. ರೆಸ್ಯೂಮ್‌ನ ಮೌಲ್ಯ ವೃದ್ಧಿಸಲು ಹೊಸ ಪದವಿ ಅಥವಾ ಕೋರ್ಸ್‌ಗಳ ಸರ್ಟಿಫಿಕೇಟ್‌ಗಳು ದಾಖಲಾಗಲಿ. ಕೆಲಸಕ್ಕೆ ಪೂರಕವಾಗಿ ಮತ್ತು ಭವಿಷ್ಯದಲ್ಲಿ ನಮ್ಮನ್ನು ಉನ್ನತೀಕರಿಸುವಂಥ ಟೆಕ್ನಾಲಜಿ ಮತ್ತು ಕೌಶಲಗಳ ವೃದ್ಧಿಗೆ ನಿರಂತರ ಕಲಿಕೆ ಅತ್ಯಗತ್ಯ. ಕೆಲಸದ ಸ್ಥಳದಲ್ಲಿಯೇ ಇರುವಂಥ ಅವಕಾಶಗಳನ್ನು ಬಳಸಿಕೊಳ್ಳಬೇಕು. ನಮ್ಮ ಕೆಲಸದ ಜತೆಗೆ ಇತರ ಕೆಲಸಗಳಲ್ಲೂ ನೈಪುಣ್ಯ ಹೊಂದಿರಬೇಕು. ಇಂದು ಹಾರ್ಡ್‌ವರ್ಕ್ ಎನ್ನುವ ಮಾತಿಗೆ ಹೆಚ್ಚಿನ ಮೌಲ್ಯವಿಲ್ಲ. ಸ್ಮಾರ್ಟ್‌ವರ್ಕ್ ಮತ್ತು ಮಲ್ಟಿ ಟಾಸ್ಕರ್‌ಗಳು ಅಥವಾ ಆಲ್‌ರೌಂಡರ್‌ಗಳಿಗೆ ಕಂಪನಿಗಳಲ್ಲಿ ಮರ್ಯಾದೆ ಜಾಸ್ತಿ. ಈ ನಿಟ್ಟಿನಲ್ಲಿ ಪೂರಕವಾದ ಕಲಿಕೆಗೆ ಆದ್ಯತೆ ನೀಡಬೇಕು.

ನಮ್ಮ ಕೌಶಲವನ್ನು ಉನ್ನತೀಕರಿಸಿ ಪ್ರಮಾಣೀಕರಿಸುವ ಅನೇಕ ಕೋರ್ಸ್‌ಗಳು ಆಫ್‌ಲೈನ್ ಮತ್ತು ಆನ್‌ಲೈನ್‌ನಲ್ಲಿ ಲಭ್ಯ ಇವೆ. ಯಾವುದೋ ಕೋರ್ಸ್‌ಗೆ ಸಾವಿರಾರು ರೂಪಾಯಿ ಖರ್ಚಾಗುತ್ತದೆ ಎಂದು ದೂರ ಸರಿಯುವುದು ಸರಿಯಲ್ಲ. ಕಲಿಕೆಗೆ ಪೂರಕವಾಗಿ ನಾವು ಮಾಡುವುದು ಖರ್ಚಿನ ಬಾಬ್ತಿಗೆ ಸೇರುವುದಿಲ್ಲ. ಅದೊಂದು ರೀತಿಯಲ್ಲಿ ಹೂಡಿಕೆ. ಸರಿಯಾದ ಷೇರುಗಳನ್ನು ಖರೀದಿಸಿದಾಗ ಲಾಭ ಹೇಗೆ ಬರುತ್ತದೆಯೋ, ನಾವು ಮಾಡುವ ಕೋರ್ಸ್‌ಗಳಿಂದ ಕೌಶಲಗಳು ವೃದ್ಧಿಯಾಗಿ ದೀರ್ಘಕಾಲದಲ್ಲಿ ಆರ್ಥಿಕ ಲಾಭವಾಗಿ ರೂಪಾಂತರಗೊಳ್ಳುತ್ತವೆ. ಕೆಲಸ ಕಲಿಯಲು ಅಥವಾ ಹೊಸ ಕೌಶಲಗಳನ್ನು ವೃದ್ಧಿಸಿಕೊಳ್ಳಲು ಅವಕಾಶವಿರುವ ಸಂಸ್ಥೆಗಳಲ್ಲಿ ಸಂಬಳ ಕಡಿಮೆಯಿದ್ದರೂ ಯೋಚಿಸಬೇಡಿ. ಕೌಶಲವೃದ್ಧಿಗೆ ಸಿಗುವ ಯಾವ ಅವಕಾಶಗಳನ್ನು ಬಿಟ್ಟುಕೊಡಬೇಡಿ.

ಉದ್ಯೋಗ ಕಡಿತ ಎನ್ನುವುದು ಈಗ ಜಾಗತಿಕ ವಿದ್ಯಮಾನ. ಹಾಗಾಗಿ, ಉದ್ಯೋಗ ಕಡಿತವನ್ನು ನೆಗೆಟಿವ್ ಆಗಿ ನೋಡುವ ಮನಸ್ಥಿತಿಯಿಂದ ನಾವು ಮೊದಲು ಹೊರಬರಬೇಕು. ನಮ್ಮ ಮುಂದಿನ ಅವಕಾಶಗಳನ್ನು ಗಣಿಗಾರಿಕೆ ಮಾಡಲು 'ಲೇ–ಆಫ್' ಸಂದರ್ಭ ಒಂದು ಒಳ್ಳೆಯ ಅವಕಾಶ ಎಂದು ಭಾವಿಸಬೇಕು. ಎಷ್ಟೋ ಮಂದಿ ಉದ್ಯೋಗ ಬಿಟ್ಟು ಸ್ಟಾರ್ಟಪ್‌ಗಳನ್ನು ಕಟ್ಟಿಕೊಂಡು ಖುಷಿಯನ್ನು ಕಂಡುಕೊಂಡಿದ್ದಾರೆ. ವೃತ್ತಿಯ ವಲಯವನ್ನೇ ಬದಲಿಸಿ ನೆಲೆ ಕಂಡುಕೊಂಡಿದ್ದಾರೆ. ಉದ್ಯೋಗ ಮಾರುಕಟ್ಟೆಯಲ್ಲಿ ಉಳಿಯಲು ಮತ್ತು ಹೊಸ ವೃತ್ತಿ ಬದುಕನ್ನು ಕಟ್ಟಿಕೊಳ್ಳಲು 'ಸ್ಕಿಲ್' ಅನ್ನುವುದೊಂದೇ ಮ್ಯಾಜಿಕ್‌ಸ್ಟಿಕ್!

'ಹುಟ್ಟಿಸಿದವನು ಹುಲ್ಲು ಮೇಯಿಸುವುದಿಲ್ಲವೆ?' ಎನ್ನುವ ಗಾದೆಯನ್ನು, 'ಸಾಮರ್ಥ್ಯ ಇದ್ದವನಿಗೆ ಕೆಲಸ ದೊರೆಯುವುದಿಲ್ಲವೇ' ಎಂದು ಬದಲಾಯಿಸಿಕೊಳ್ಳಲು ಇದು ಸಕಾಲ.

ಎದುರಿಗಿದೆ ಅವಕಾಶಗಳ ಆಕಾಶ.

ಆಲ್ ದಿ ಬೆಸ್ಟ್!

ಪ್ರತಿಕ್ರಿಯಿಸಿ: feedback@sudha.co.in